ಸಿ.ಮಿಸ್.ನಂಃ 472/2023
ಪಿ.ಡಬ್ಲ್ಯೂ-01

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಗಳು, ಹೆಗ್ಗಡದೇವನಕೋಟೆ.**

**ಸಿ.ಮಿಸ್. ನಂಃ 472/2023**

| | | |
|---|---|---|
| ಸಾಕ್ಷಿದಾರರ ಹೆಸರು | : | ರೇಖಾ |
| ಗಂಡನ ಹೆಸರು | : | ಸಿದ್ಧೇಗೌಡ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಶಿರಮಳ್ಳಿ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 03.10.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎ.ಟಿ.ಕೆ. ವಕೀಲರಿಂದಃ**

ನಾನು 1 ನೇ ಅರ್ಜಿದಾರಳಾಗಿದ್ದು, ನನ್ನ ಮುಖ್ಯ ವಿಚಾರಣೆ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತವೆ.

ಮಣಪ್ಪುರಂ ಫೈನಾನ್ಸ್ ಲಿ. ಕಂಪನಿಯಲ್ಲಿ ಚಿನ್ನವನ್ನು ಅಡವಿಟ್ಟು ಸಾಲ ಪಡೆದಿರುವುದಕ್ಕೆ ಸಂಬಂಧಿಸಿದಂತೆ ಮಣಪ್ಪುರಂ ಫೈನಾನ್ಸ್ ಲಿ. ಕಂಪನಿಯವರು ನೀಡಿರುವ ಗ್ರಾಹಕರ ನಕಲಿನ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-1 ಎಂದು ಗುರುತಿಸಲಾಯಿತು.

ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕಿನವರು ನೀಡಿರುವ ಲೋನ್ ಕಾರ್ಡ್ ಅನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-2 ಎಂದು ಗುರುತಿಸಲಾಯಿತು.

ಸಿ.ಮಿಸ್.ನಂಃ 472/2023

ಪಿ.ಡಬ್ಲ್ಯೂ-01

ಆದಿಚುಂಚನಗಿರಿ ಶಾಲಾ ಸಂಸ್ಥೆಯವರು ನೀಡಿರುವ 02 ಶಾಲಾ ಶುಲ್ಕ ಪಾವತಿ ರಸೀದಿಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.-3 ಮತ್ತು ನಿ.ಪಿ.-4 ಎಂದು ಗುರುತಿಸಲಾಯಿತು.

ಮೀನಾಕ್ಷಿ ಬ್ಯಾಂಕರ್ಸ್ ಮತ್ತು ರಾಜೇಶ್ ಪಾನ್ ಬ್ರೋಕರ್ಸ್ ರವರು ನೀಡಿರುವ ಗಿರಿವಿ ರಸೀದಿಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.-5 ಮತ್ತು ನಿ.ಪಿ.-6 ಎಂದು ಗುರುತಿಸಲಾಯಿತು.

03 ಗೋಲ್ಡ್ ಅಕೌಂಟ್ ಪಾಸ್ ಕಾರ್ಡ್ ಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.-7 ರಿಂದ ನಿ.ಪಿ.-9 ಎಂದು ಗುರುತಿಸಲಾಯಿತು.

ಸರಗೂರು ಪೋಲೀಸ್ ಠಾಣೆಯವರು ನೀಡಿರುವ ಸ್ವೀಕೃತಿ ಮತ್ತು ಹಿಂಬರಹವನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.-10 ಮತ್ತು ನಿ.ಪಿ.-11 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u> ಎದುರುದಾರರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಲಾಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**